# ಇಕ್ಕಲಾರೆ ಕೈ ಎಂಜಲು ಚಿಕ್ಕ ಮಕ್ಕಳು ಅಳುತಾರೆ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings, given without highlights, are as per Ref. 2. The wordings in Ref. 1 are similar to Ref. 1 except few wordings which are given in yellow highlights. The wordings in Ref. 3 are similar to Ref. 1 except few differences, which are given in green highlights.
4. **Note:** Singer has followed wordings as in Ref. 2.

ರಾಗ ಪೂರ್ವಿ                    ತಾಳ ಅಟ್ಟ

ಇಕ್ಕಲಾರೆ ಕೈ ಎಂಜಲು ಚಿಕ್ಕ
ಮಕ್ಕಳು ಅಳುತ್ತಾರೆ (ಅಳುತಾವೆ) ಹೋಗೋ ದಾಸಯ್ಯ    ‖ ಪ ‖

ಮಡಕೆ ತೊಳೆಯುತೇನೆ, ಮನೆಯ ಸಾರಿಸುತೇನೆ
ಹುಡುಗರೊಬ್ಬರ ಕಾಣೆ ಹೋಗೋ ದಾಸಯ್ಯ
ತೊಡೆಯ ಮೇಲಿನ ಕೂಸು ಮೊಲೆಯನುಣ್ಣುತ್ತಲಿದೆ
ಹುಡುಗಾಟ ಮಾಡದೆ ಹೋಗೋ ದಾಸಯ್ಯಾ)    ‖ 1 ‖
(ಮಡಕೆ ತೊಳೆಯುತೇನೆ, ಮನೆಯ ಸಾರಿಸುತೇನೆ
ಒಡೆಯರಿಲ್ಲ ಕಾಣೊ ಹೋಗೋ ದಾಸಯ್ಯ
ತೊಡೆಯ ಮೇಲಣ ಕೂಸು ಮೊಲೆಹಾಲನುಣುತಿದೆ
ನಡೆ ನಡೆ ಕರಕರೆ ಮಾಡದೆ ದಾಸಯ್ಯ)
(ಮನೆಯ ಸಾರಿಸುತೇನೆ ಮಡಕೆ ತೊಳೆಯುತೇನೆ
ಮನೆಯೊಳಗ್ಯರಿಲ್ಲ ಹೋಗೋ ದಾಸಯ್ಯ
ತನಯರು ಅಳುತಾರೆ ನಿನದೇನು ಕಾಟವೋ
ಕ್ಷಣ ಹೊತ್ತು ನಿಲ್ಲದೆ ಹೋಗೋ ದಾಸಯ್ಯ)

ಅಟ್ಟದ ಮೇಲಿನ ಅಕ್ಕಿ ತೆಗೆಯಬೇಕು
ಹೊಟ್ಟೆ ನೋಯುತ್ತಲಿದೆ, ಹೋಗೋ ದಾಸಯ್ಯ
ಮುಟ್ಟಾಗಿ ಇದ್ದೇನೆ ಮನೆಯೊಳಗಾರಿಲ್ಲ
ನಿಷ್ಠೂರ ಮಾಡದೆ, ಹೋಗೋ ದಾಸಯ್ಯ || 2 ||
ಅಟ್ಟದ ಮೇಲಿನ ಅಕ್ಕಿ ತೆಗೆಯಲಾರೆ
ಹೊಟ್ಟೆ ನೋವು ಕಾಣು ಹೋಗೋ ದಾಸಯ್ಯ
ಮುಟ್ಟಾಗಿ ಕುಳಿತೇನೆ ಮನೆಯವರಿಲ್ಲವೊ
ಕಟ್ಟುಗ್ರ ಮಾಡದೆ ಹೋಗೋ ದಾಸಯ್ಯ || 2 ||

ವೀಸದ ಕಾಸಿಗೆ ದವಸವ ನಾ ತಂದೆ
ಕೂಸಿಗೆ ಸಾಲದು ಹೋಗೋ ದಾಸಯ್ಯಾ
ಆಸೆಕಾರ ನೀನು, ದೋಷಕಾರಿ ನಾನು
ಶೇಷಾಚಲ ವಾಸ, ಪುರಂದರ ವಿಠ್ಠಲ || 3 ||
(ವೀಸದ ಕಾಸಿನ ದವಸವ ತಂದಾರೆ
ಕೂಸಿಗೆ ಸಾಲದು ಹೋಗೋ ದಾಸಯ್ಯಾ
ಆಸೆ ಮಾಡಲುಬೇಡ ದೋಷಕಾರ್ತಿ ನಾನು
ಶೇಷಾದ್ರಿ ಪುರಂದರ ವಿಠ್ಠಲ ದಾಸಯ್ಯ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಉಪಾದಾನಕ್ಕೆ ಬಂದ ದಾಸರಿಗೆ ಎಲ್ಲರ ಮನೆಯಲ್ಲೂ ಭಿಕ್ಷೆ ದೊರೆಯುವುದೆಂಬ ನೆಚ್ಚಿಗೆಯಿಲ್ಲ. ಕೊಡಲು ಮನಸ್ಸಿಲ್ಲದವರು ಬೇರೆ ಬೇರೆ ಕಾರಣಗಳನ್ನು ಹೇಳಿ ಮುಂದಕ್ಕೆ ಕಳುಹಸಿಬಿಡುತ್ತಾರೆ. ಈ ಪದದಲ್ಲಿ ದಾಸರು ಇದನ್ನು ಎತ್ತಿ ಆಡಿದ್ದಾರೆ.

**ವೀಸ** – 'ಹಣ'ವೆಂಬ ನಾಣ್ಯದ ಹದಿನಾಲ್ಕನೇ ಒಂದು ಭಾಗ.

**ಕಾಸು** – ಸಣ್ಣ ನಾಣ್ಯ.

**ಆಸೆಕಾರ ನೀನು ದೋಷಕಾರಿ ನಾನು** – ಹಲವರ ಮನೆಯಿಂದ ಉಪಾದಾನವನ್ನು ಪಡೆದುಕೊಳ್ಳುವ ಆಸೆ ನಿನಗೆ; ಬೇಡುತ್ತ ಬಂದವರಿಗೆ ಏನನ್ನೂ ಕೊಡದೆ ಹೊರದೂಡುವ ದೋಷ ನನಗೆ. ಆಸೆಗಾರನೆಂದರೆ ದುರಾಶೆಯ ಮನುಷ್ಯ.

**Classification:** Keerthane

**Ankita:** purandara vittala

**Location:** NA

**Category:** jeevana darshana

**Sub-Category:** koosu, tande, kai, enjalu, rokka, tirupati, udara, makkalu, mane, udara, rokka, shesha, srinivasa,

**Pravachana:** NA

**Explanation:** NA